ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ತಮಗೆ ನಾವು ಅಭಾರಿಯಾಗಿದ್ದೇವೆ. ಅವರು ಕೇಳ ತಕ್ಕದ್ದು ಪಿಂಪಲ್ ಆಗಿದೆ. ರೋಸ್ಟರ್ ಪ್ರಕಾರ ರೆಗ್ಯುಲರೈಸ್ ಮಾಡಿ ಕೊಡಿ ಎಂದು ಕೇಳುತ್ತಿದಾರೆ ಅದಕ್ಕೆ ಆಗಬಹುದು ಅಥವಾ ಇಲ್ಲ ಎಂದು ಹೇಳುವುದಕ್ಕೆ ತೊಂದರೆಯೇನು ?

ಅಧ್ಯಕ್ಷರು.—ಮಾಹಿತಿ ತರಿಸಿಕೊಂಡು ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಭವನದಲ್ಲಿ ಮತ್ತು ಕುಮಾರ ಕೃಪದಲ್ಲಿ ನೇಮಕಗೊಂಡಿರತಕ್ಕ ಕೆಲಸಗಾರರು ಸಿಆಂಡ್ ಆರ್‌ರೂಲ್ಸ್ ಪ್ರಕಾರ ನೇಮಕಗೊಂಡಿದ್ದಾರೆ. ಇಲ್ಲಿರತಕ್ಕ ಪ್ರಶ್ನೆ ಅವರು ಆ ರೀತಿ ನೇಮಕಗೊಂಡಿಲ್ಲ ಎಂದು ಅದಕ್ಕೊಸ್ಕರ ಆ ನಿಯಮವನ್ನು ಇವರಿಗೆ ಅನ್ವಯಿಸುವುದಕ್ಕಾಗುವುದಿಲ್ಲ.

ನಿಯಮ ೩೫೪ರ ಮೇರೆಗೆ

ಎನ್.ಆರ್. ಡಬ್ಲ್ಯೂ ಸ್ಕೀಮಿನಿಂದ ಕುಡಿಯುವ ನೀರನ್ನು ಅರಕಲಗೋಡು ತಾಲ್ಲೂಕಿನ ಹಳ್ಳಿಗಳಿಗೆ ಒದಗಿಸುವ ಬಗ್ಗೆ

ಶ್ರೀ ಕೆ.ಬಿ. ಮಲ್ಲಪ್ಪ.—ಅರಕಲಗೂಡು ತಾಲ್ಲೂಕಿನಲ್ಲಿ ಸುಮಾರು ೩೦೦ ಹಳ್ಳಿಗಳು ಇದ್ದು ಸದರಿ ಹಳ್ಳಿಗಳಿಗೆ ಸಂಬಂದಿಸಿದಂತೆ ೨೫೦ ಕೊಪ್ಪಲುಗಳಿದ್ದು ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ಸರಬರಾಜು ಆಗಿರುವುದಿಲ್ಲ. ಕೆಲವು ಹಳ್ಳಿಗಳಿಗೆ ಕೊಳವೆ ಬಾವಿಗಳನ್ನು ಆಳವಡಿಸಿದ್ದರೂ ಕೆಲವು ಕೆಟ್ಟು ಹೋಗಿ ರಿಪೇರಿ ಇಲ್ಲದೆ ಸಂಬಂಧಪಟ್ಟ ಹಳ್ಳಿಯವರು ಕುಡಿಯುವ ನೀರಿಗೆ ಬಹಳ ತೊಂದರೆ ಪಡುವಂತಾಗಿದೆ. ಕೆಲವು ಹಳ್ಳಿಗಳಲ್ಲಿ ಎನ್. ಆರ್. ಡಬ್ಲ್ಯೂ. ಎಸ್. ಮತ್ತು ಮಿನಿ ವಾಟರ್ ಸಪ್ಲೈ ಸ್ಕೀಂನಲ್ಲಿ ತೆಗೆದುಕೊಂಡ ಕೆಲವು ಅರ್ಧಕ್ಕೆ ನಿಂತಿರುವ ಬಗ್ಗೆ ಮಾನ್ಯ ಪಂಚಾಯಿತ್ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಉತ್ತರ ಕೊಡಿಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕು ಕುಪ್ಪಲೂರು ಗ್ರಾಮದಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪರಿಹಾರಧನ ಪಾವತಿಯಾಗದಿರುವುದು

ಶ್ರೀ ಕೆ. ಬಿ. ಕೋಳಿವಾಡ್.—ರಾಣೆಬೆನ್ನೂರು ತಾಲ್ಲೂಕು ಕುಪ್ಪೆಲೂರು ಗ್ರಾಮದ ಹತ್ತಿರ ಕುಮುದ್ವತಿ ನದಿಯ ಸೇತುವೆಗೆ ಕೂಡಿಸುವರಸ್ತೆ ನಿರ್ಮಾಣಕ್ಕೆ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಸುಮಾರು ೧೫ ವರ್ಷಗಳಾಗಿವೆ. ಆವುಗಳ ಬಗ್ಗೆ ರಾಣೆಬೆನ್ನೂರು ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅವಾರ್ಡ್ ಸಹ ಆಗಿದ್ದು ಇದೆ. ಸದರಿ ಕೇಸುಗಳ ಬಗ್ಗೆ ವರಖಾಸ್ತು ನಡೆದಿದ್ದು ಅಧಿಕಾರಿಗಳ ಅಲಕ್ಷ್ಯ ತನದಿಂದ ಬೇಳೆ ರೈತರಿಗೆ ಪಣ ಸಿಗುವಂತಾಗಿ ಬಹಳ ತೊಂದರೆಯಾಗಿದೆ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಿ ಭೇಗನೆ ಬಡ ರೈತರಿಗೆ ಹಣ ಸಿಗುವಂತೆ ಮಾಡುವಿರೆಂಬ ಕಂತೊ ಪಲದಿಂದ ಈ ವಿಷಯವನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಣೆಬೆನ್ನೂರು ತಾಲ್ಲೂಕು, ಕುಮುದ್ವತಿ ನದಿಯ ಸೇತುವೆಗೆ ಕೂಡಿಸುವ ರಸ್ತೆ ನಿರ್ಮಾಣಕ್ಕಾಗಿ ಕುಪ್ಪೆಲೂರ, ಗೋಡಿಹಾಳ ಮತ್ತು ಯಲಬಡಗಿ ಗ್ರಾಮಗಳಲ್ಲಿ ಈ ಕೆಳಗೆ ವಿವರಿಸಿದಂತೆ ಒಟ್ಟು ೨೮ ಎಕರೆ ೨೨ ಗುಂಟೆ ೦೩ ಚೆದುರ ಅಡಿ ಕ್ಷೇತ್ರದ ಜಮೀನುಗಳನ್ನು ಸ್ವಾಧೀನ ಮಾಡಲು ಆದೇಶವನ್ನು ಹೊರಡಿಸಲಾಗಿದ್ದು, ಕಲಂ ೬(೧)ರ ಅಧಿಸೂಚನೆಯು ದಿನಾಂಕ ೫-೭-೧೯೭೫ರ ರಾಜ್ಯ ಪತ್ರದಲ್ಲಿ ಪ್ರಕಟವಾಗಿದೆ.

ಗ್ರಾಮಗಳು	ಜಮೀನಿನ ವಿಸ್ತೀರ್ಣ
	ಮಾ—ಗು—ಅಡಿ
೧) ಕುಪ್ಪೆಲೂರು	೧೩—೧೨—೧೦೭
೨) ಗೋಡಿಹಾಳ	೦೩—೨೨—೦೦೫
೩) ಯಲಬುಡಗಿ	೦೩—೨೭—೧೧೨
ಒಟ್ಟು	೨೪—೨೨—೦೦೫

ಮೇಲ್ಕಂಡ ಜಮೀನುಗಳಿಗೆ ಪ್ರತಿ ಎಕರೆಗೆ ಸುಮಾರು ೨,೫೦೦-೦೦ ರೂಪಾಯಿಗಳಂತೆ ೬೦,೦೫೭-೭೧ ರೂಪಾಯಿಗಳಿಗೆ, ದಿನಾಂಕ ೧೭-೧೨-೧೯೬೦ ರಂದು ಜಪ್ತೀರ್ಪನ್ನು ಆನಂದೋರಿಸಲ್ಪಟ್ಟಿದ್ದು, ಈ ಪೈಕಿ ದಿನಾಂಕ ೧೭-೧೨-೧೯೬೦ ರಂದು ಹಾಗೂ ೨೧-೬-೧೯೬೧ ರಂದು ಕ್ರಮವಾಗಿ ೪೫,೯೪-೭೨ ರೂಪಾಯಿಗಳನ್ನೂ ಹಾಗೂ ೫,೫೫೬-೪೯ ರೂಪಾಯಿಗಳನ್ನು ಭೂಮಾಲೀಕರಿಗೆ ಪರಿಹಾರ ಧನವನ್ನಾಗಿ ಪಾವತಿ ಮಾಡಲಾಗಿದೆ. ಮೇಲ್ಕಂಡ ಗ್ರಾಮಗಳ ಒಟ್ಟು ೩೭ ಜನರು ಜಮೀನನ್ನು ಕಳೆದುಕೊಂಡಿರುತ್ತಾರೆ. ಮೇಲೆ ಹೇಳಿರುವ ಸಾಮಾಯ ಮಾಡಿದ ಪರಿಹಾರ ಧನಕ್ಕೆ ಸಮಾಧಾನ ಹೊಂದದೆ ಕೆಲವು ಭೂಮಾಲೀಕರುಗಳು ಭೂಸ್ವಾಧೀನ ಕಾಯ್ದೆ ಕಲಂ ೧೮ರನ್ವಯ ಹೆಚ್ಚಿನ ಪರಿಹಾರಕ್ಕಾಗಿ ರಾಣೆಬೆನ್ನೂರಿನ ಸಿವಿಲ್ ನ್ಯಾಯಾಲಯದಲ್ಲಿ ಎಲ್‌ಎಸಿ ಸಂಖ್ಯೆ ೧೪:೮೧, ೧೫:೮೧, ೪೬:೮೧, ೪೭:೮೧,೪೮:೮೧, ೫೦:೮೧, ೫೧ ೮೧, ೫೨:೮೧, ೫೫:೮೧ ಮತ್ತು ೫೮:೮೧ರಲ್ಲಿ ಅಜಿಯು ಸಲ್ಲಿಸಿದ್ದರು, ಮೇಲ್ಕಂಡ ಎಲ್‌ಎಸಿ ಸಂಖ್ಯೆಗಳ ಬಗ್ಗೆ ನ್ಯಾಯಾಲಯವು ದಿನಾಂಕ ೧೯-೧೨-೧೯೬೫ರಂದು ನೀಡಿರುವ ಆದೇಶದಲ್ಲಿ ಪ್ರತಿ ಎಕರೆಗೆ ೬,೮೦೦-೦೦ ರೂಪಾಯಿಗಳ ಪರಿಹಾರ ಧನವನ್ನು ನಿಗದಿಮಾಡಿತ್ತು. ಸದರಿ ಡಿಕ್ರಿ ಮೊಕದ್ದೆಗೆ ೪,೧೧,೯೭೬-೦೪ ರೂಪಾಯಿಗಳನ್ನು ನ್ಯಾಯಾಲಯದಲ್ಲಿ ಜಮಾ ಮಾಡಿದ್ದು, ಅಪೀಲುದಾರರು ನ್ಯಾಯಾಲಯದಲ್ಲಿ ಈಗಾಗಲೇ ಪರಿಹಾರ ಧನವನ್ನು ಪಡೆದಿರುತ್ತಾರೆ. ನ್ಯಾಯಾಲಯದಿಂದ ತಿಳುವಳಿಕೆ ಬಂದ ಕೂಡಲೇ ಡಿಕ್ರಿ ಹಣವನ್ನು ಸಂದಾಯ ಮಾಡಲಾಗಿದೆ. ಡಿಕ್ರಿ ಹಣವನ್ನು ಸಂದಾಯ ಮಾಡುವಲ್ಲಿ ಯಾವುದೇ ವಿಳಂಬ ಮಾಡಿರುವುದಿಲ್ಲ. ಮಿಸ್‌ಲೇನಿಯಸ್ ಆಫೀಲುಗಳ ಸಂಖ್ಯೆ ೪೯ ರಿಂದ ೫೧ ಮತ್ತು ೫೩ ರಿಂದ ೫೫:೮೧ರ ಪ್ರಕರಣಗಳಲ್ಲಿ ಸದ ಲಿಟ್ಲ್‌ಅವರ್ಡ-೬೩ ರೂಪಾಯಿಗಳ ಡಿಕ್ರಿ ಹಣವನ್ನು ರಾಣೆಬೆನ್ನೂರಿನ ಸಿವಿಲ್ ನ್ಯಾಯಾಲಯದಲ್ಲಿ ಜಮಾ ಮಾಡಲಾಗಿದೆ. ನ್ಯಾಯಾಲಯದಿಂದ ತೀರ್ಪು ಬಂದ ಕೂಡಲೇ ಪರಿಹಾರ ಧನವನ್ನು ಸಂದಾಯ ಮಾಡಲಾಗುತ್ತದೆ.

(೩) ಮೈಸೂರಿನ ಕೆ.ಆರ್. ಮಿಲ್ ಮುಚ್ಚಿರುವುದನ್ನು ತೆರೆಯುವ ಬಗ್ಗೆ

ಶ್ರೀ ಎಂ.ಎಸ್. ಕೃಷ್ಣನ್ಸ್.—ಮಾನ್ಯ ಅಧ್ಯಕ್ಷರೆ, ಮೈಸೂರಿನ ಕೃಷ್ಣರಾಜೇಂದ್ರ ಮಿಲ್ ಮುಚ್ಚಿ ಎರಡೂವರೆ ವರ್ಷಗಳಾಯಿತು. ಮೂರು ಸಾವಿರ ಕಾರ್ಮಿಕರು ಕೆಲಸವಿಲ್ಲದೆ ಆಲೆಯುವಂತಾಗಿ ಪರಿಸ್ಥಿತಿ ಬಂದಿದೆ. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನವರು, ನಾನು ಮತ್ತು ನೀರೆ ಬೇರೆ ಯೂನಿಯನ್‌ಗಳವರು ಅನೇಕ ಬಾರಿ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮತ್ತು ಸರ್ಕಾರ ಪರಿಣಾಮಕಾರಿಯಾದ ಕಾರ್ಯಕ್ರಮ ತೆಗೆದುಕೊಳ್ಳಲಿ ಕು, ಫ್ಯಾಕ್ಟರಿ ತೆಗೆಯೋಣ ರೀತಿ ಮಾಡಬೇಕು, ಕಾರ್ಮಿಕರಿಗೆ ಕೆಲಸ ಸಿಗುವ ಹಾಗೆ ಮಾಡಬೇಕು ಎಂದು ಪದೇ ಪದೇ ಹೇಳಿದ್ದೇವೆ. ಸರ್ಕಾರದವರು ಕೂಡ ನಾವು ಅದಷ್ಟು ಮಾಡುತ್ತೇವೆ, ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ಎಂಬ ಅಭಿಪ್ರಾಯವನ್ನು ಪ್ರತಿಯೊಂದು ಸಾರಿ ವ್ಯಕ್ತ ಮಾಡುತ್ತಾ ಬಂದಿದ್ದಾರೆ. ಮಾಲೀಕ, ಸರ್ಕಾರ ಹೇಳುವಂಥ ಯಾವ ತೀರ್ಮಾನಗಳನ್ನೂ ಜಾರಿಗೆ ತರುವುದಕ್ಕೆ ತಯಾರಿಲ್ಲ. ಪರಿಸ್ಥಿತಿ ಹಾಗೇ ಮುಂದುವರೆಯುತ್ತಿದೆ. ಹೀಗಿರುವಾಗ ನಾವೆಲ್ಲಾ ಮಾಡಿದ್ದೇವೆ ಎಂದು ಹೇಳುವುದು ಸರಿಯಾದುದಲ್ಲ. ಸರ್ಕಾರ ಇನ್ನೂ ಕೂಡ ದಿಟ್ಟತನದಿಂದ ನಿಲುವನ್ನು ತೆಗೆದುಕೊಳ್ಳಬೇಕು. ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ ಆಕ್ಟ್ ಪ್ರಕಾರ ಸರ್ಕಾರವೇ ಮಿಲ್ಲನ್ನು ತೆಗೆದುಕೊಳ್ಳಬೇಕು ಎಂಬ ಅಭಿಪ್ರಾಯವನ್ನೂ ಕೊಟ್ಟಿದ್ದೇವೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಟೆಕ್ಸ್‌ಟೈಲ್ ಕಾರ್ಪೊರೇಷನ್ ಮಾಡಬೇಕು ಎಂದು ಹೇಳಿದ್ದೇವೆ. ಪಂಜಾಬ್‌ರಾಷ್ಟ್ರದಲ್ಲಿ ಯಶಪರೀತಿಯಾಗಿ ಮಾಡಿದ್ದಾರೊ ಅದೇ ರೀತಿಯಾಗಿ ಮಾಡಿ ಇಂಥ ಮುಚ್ಚಿರುವಂತಹ ಕೈಗಾರಿಕೆಗಳನ್ನು ನಮ್ಮ ರಾಜ್ಯದಲ್ಲಿ